**ಸ್ಥಾಪನೆ : 1973**

Phone No. : 26506213 / 26606365
E-mail : ho@ashoknagarbank.com
Website : https://www.ashoknagarbank.com

## ಅಶೋಕನಗರ ಸಹಕಾರ ಬ್ಯಾಂಕ್ ನಿಯಮಿತ

**ನಂ. 1380/ಬಿ, 6ನೇ ಅಡ್ಡರಸ್ತೆ, ಅಶೋಕನಗರ, ಬನಶಂಕರಿ 1ನೇ ಹಂತ,**
**2ನೇ ಬ್ಲಾಕ್, ಬೆಂಗಳೂರು–560 050.**

# 2023–24ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆ

## ಸೂಚನಾ ಪತ್ರ

**ಸನ್ಮಾನ್ಯ ಸದಸ್ಯರೇ**

ಬ್ಯಾಂಕಿನ 2023–24ನೇ ಸಾಲಿನ 51ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ 22–09–2024ನೇ ಭಾನುವಾರ ಬೆಳಿಗ್ಗೆ 10.30 **ಕ್ಕೆ ಶ್ರೀ ಕುಚಲಾಂಬ ಕಲ್ಯಾಣ ಮಹಲ್, ಜಯನಗರ 2ನೇ ಬ್ಲಾಕ್, 9ನೇ ಮುಖ್ಯ ರಸ್ತೆ, ಮಾಧವನ್ ಪಾರ್ಕ್ ಹತ್ತಿರ, ಬೆಂಗಳೂರು** ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಕೆ. ಎಮ್. ನಾಗರಾಜ್ ರವರ** ಘನ ಅಧ್ಯಕ್ಷತೆಯಲ್ಲಿ ಈ ಕೆಳಗಿನ ವಿಷಯಗಳ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುವ ಸಲುವಾಗಿ ಕರೆಯಲಾಗಿದೆ. ಆದುದರಿಂದ ತಾವೆಲ್ಲರೂ ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿಸಲಾಗಿದೆ.

**–: ವಿಷಯಗಳು :–**

1. ಪ್ರಾರ್ಥನೆ
2. ಸ್ವಾಗತ ಭಾಷಣ
3. ನಿಧನ ಹೊಂದಿದ ಸದಸ್ಯರುಗಳಿಗೆ ಗೌರವಾರ್ಥವಾಗಿ ಸಂತಾಪ ಸೂಚನೆ.
4. ಸರ್ವಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ದಾಖಲು ಮಾಡುವುದು.
5. 2022–23ನೇ ಸಾಲಿನ 50ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ಓದಿ ದಾಖಲಿಸುವುದು.
6. 2023–24ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯ ಪರಿಶೀಲನೆ ಮತ್ತು ಅಂಗೀಕಾರ.

7. 2024–25ನೇ ಸಾಲಿನ ಕಾರ್ಯಯೋಜನೆಗೆ ಅನುಮೋದನೆ.

8. 2023–24ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರಗಳ ತಃಖ್ತೆ ಲೆಕ್ಕಪರಿಶೋಧನಾ ವರದಿ ಮತ್ತು ಮಂಡಳಿಯ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.

9. 2023–24ನೇ ಸಾಲಿನ ಅಂದಾಜು ಆಯ–ವ್ಯಯಕ್ಕಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು ಮತ್ತು 2024–25ನೇ ಸಾಲಿನ ಅಂದಾಜು ಆಯ–ವ್ಯಯವನ್ನು ಮಂಜೂರು ಮಾಡುವುದು.

10. 2023–24ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.

11. 2024–25ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು.

12. ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಯಾವುದೇ ರೀತಿಯ ಸಾಲ ಪಡೆದಿದ್ದಲ್ಲಿ ಅವುಗಳ ಪರಿಶೀಲನೆ.

13. ಬ್ಯಾಂಕಿನ ಸದಸ್ಯತ್ವಕ್ಕೆ ಸೇರ್ಪಡೆ ಮತ್ತು ತೆಗೆದು ಹಾಕಿದ ಸದಸ್ಯರ ಕುರಿತು ಟಿಪ್ಪಣಿ.

14. ನಿಧಿಗಳ ವಾಸ್ತವಿಕ ಬಳಕೆಗಳ ಬಗ್ಗೆ ವಿಮರ್ಶೆ.

15. ಸರ್ವ ಸದಸ್ಯರ ಸಭೆಯ ನಿರ್ಣಯಗಳನ್ನು ಅಂಗೀಕರಿಸುವುದು.

16. ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳು.

ದಿನಾಂಕ : 29–08–2024
ಸ್ಥಳ : ಬೆಂಗಳೂರು–560050

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
**ಎಸ್. ಟಿ. ಮಂಗಳ**
ಕಾರ್ಯದರ್ಶಿ

## 51ನೇ ವಾರ್ಷಿಕ ಸರ್ವಸದಸ್ಯರ ಸಭೆಯ ವಿಷಯಗಳ ಮೇಲೆ ಸಂಕ್ಷಿಪ್ತ ಟಿಪ್ಪಣಿ

**ವಾರ್ಷಿಕ ವರದಿಯ ಪುಸ್ತಕವನ್ನು ದಿನಾಂಕ 10–09–2024 ರಿಂದ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಪಡೆಯ ಬೇಕಾಗಿ ವಿನಂತಿ.**

ವಿಷಯ 5 : 2022–23ನೇ ಸಾಲಿನ 50ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದ್ದು ಅನುಮೋದನೆಗೆ ಸಲ್ಲಿಸಲಾಗಿದೆ.

ವಿಷಯ 6 : 2023–24ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದೆ ಮತ್ತು ಸರ್ವಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ.

ವಿಷಯ 7 : 2024–25ನೇ ಸಾಲಿನ ಕಾರ್ಯ ಯೋಜನೆ ಈ ಕೆಳಕಂಡಂತಿದೆ.

(1) ನಿವ್ವಳ ನಿಷ್ಕ್ರಿಯ ಆಸ್ತಿಯ ಪ್ರಮಾಣವನ್ನು ಶೇಕಡ 2.00% ಕ್ಕೆ ಇಳಿಸಿವುದು.

(2) ಬ್ಯಾಂಕಿನ ಒಟ್ಟು ವ್ಯವಹಾರಗಳನ್ನು ರೂ 200 ಕೋಟಿಗಳಿಗೆ ಹೆಚ್ಚಿಸುವುದು.

(3) ಬ್ಯಾಂಕಿನ ಗ್ರಾಹಕರುಗಳಿಗೆ IMPS ಸೌಲಭ್ಯಗಳನ್ನು ಒದಗಿಸುವುದು.

(4) ನಗದು ರಹಿತ ವ್ಯವಹಾರವನ್ನು ಉತ್ತೇಜಿಸಲು ಗ್ರಾಹಕರಿಗೆ/ಸದಸ್ಯರಿಗೆ QR CODE ಸೌಲಭ್ಯ ಒದಗಿಸುತ್ತಿದ್ದು mobile Banking ಪರವಾನಗಿ ಪಡೆಯಲು ರಿಸರ್ವ್ ಬ್ಯಾಂಕಿಗೆ ಅನುಮತಿ ಕೋರಿದ್ದು, ಈ ಸೌಲಭ್ಯವನ್ನು ಎಲ್ಲಾ ಸದಸ್ಯರು/ ಗ್ರಾಹಕರಿಗೆ ವಿಸ್ತರಿಸುವುದು.

ವಿಷಯ 8 : 2023–24ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳನ್ನು ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದ್ದು ತಮ್ಮ ಅನುಮೋದನೆಗೆ ಸಲ್ಲಿಸಲಾಗಿದೆ.

ವಿಷಯ 9 : 2023–24ನೇ ಸಾಲಿನಲ್ಲಿ ಹೆಚ್ಚುವರಿ ಆಗಿರುವ ಖರ್ಚಿನ ವಿವರಗಳು ಮತ್ತು ಅದಕ್ಕೆ ಕಾರಣಗಳನ್ನು, 2024–25ನೇ ಸಾಲಿಗೆ ಅಂದಾಜು ಆಯವ್ಯಯವನ್ನು ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದೆ. ಮತ್ತು ಸರ್ವಸದಸ್ಯರ ಅನುಮೋದನೆಗೆ ಸಲ್ಲಿಸಲಾಗಿದೆ.

ವಿಷಯ 10 : ಬ್ಯಾಂಕು ಕಳೆದ ವರ್ಷಕ್ಕಿಂತ ರೂ 85.00 ಲಕ್ಷಗಳಷ್ಟು ಹೆಚ್ಚು ಲಾಭ ಗಳಿಸಿದೆ.

ವಿಷಯ 11 : ಮೆ॥ ಎಸ್.ಆರ್.ಆರ್ ಕೆ. ಶರ್ಮ ಅಸೋಸಿಯೇಟ್ಸ್ ಅವರನ್ನು 2024–25ನೇ ಸಾಲಿಗೆ ಮುಂದುವರೆಸುವಂತೆ ರಿಸರ್ವ್ ಬ್ಯಾಂಕಿಗೆ ಪತ್ರ ಬರೆದಿದ್ದು ಅವರಿಂದ ಅನುಮತಿ ಬಂದ ನಂತರ ಅವರನ್ನು ಮುಂದಿನ ವರ್ಷದ ಲೆಕ್ಕಪರಿಶೋಧಕರನ್ನಾಗಿ ಮುಂದುವರೆಸಲಾಗುವುದು.

ವಿಷಯ 12 : ನಿರ್ದೇಶಕರು ಮತ್ತು ಅವರ ಸಂಬಂಧಿಗಳಿಗೆ ಯಾವುದೇ ರೀತಿಯ ಸಾಲಗಳನ್ನು ನೀಡಿರುವುದಿಲ್ಲ.

ವಿಷಯ 13 : ಪ್ರಸಕ್ತ ಸಾಲಿನಲ್ಲಿ 85 ನಿಯತ ಸದಸ್ಯರನ್ನು 28 ಸಹ ಸದಸ್ಯರನ್ನು ಸೇರಿಸಿಕೊಳ್ಳಲಾಗಿದೆ 87 ನಿಯತ ಹಾಗೂ 19 ಸಹಸದಸ್ಯರ ಸದಸ್ಯತ್ವ ವಾಪಸ್ಸು ಮಾಡಲಾಗಿದೆ. ವಿವರಗಳನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದೆ ಹಾಗೂ ಸರ್ವ ಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ.

ವಿಷಯ 14 : ನಿಧಿಗಳ ವಾಸ್ತವಿಕ ಬಳಕೆ ಈ ಕೆಳಕಂಡಂತಿದೆ.

(1) ಸಾಮಾನ್ಯ ನಿಧಿ : ರೂ. 87,940/– ಗಳನ್ನು ವಿವಿಧ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ಸದಸ್ಯರ ಮಕ್ಕಳಿಗೆ ದಿನಾಂಕ 25.09.2023 ರಂದು ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಮತ್ತು ಬ್ಯಾಂಕಿನ ಸಿಬ್ಬಂದಿ ನಿವೃತ್ತರಾಗಿದ್ದು ಅವರ ಬೀಳ್ಕೊಡುಗೆ ಸಮಾರಂಭಕ್ಕೆ ಖರ್ಚು ಮಾಡಲಾಗಿದೆ.

(2) ಮರಣ ಪರಿಹಾರ ನಿಧಿಯಿಂದ ಆರು ಜನರಿಗೆ ಒಟ್ಟು ರೂ. 30,000/– ಗಳನ್ನು ನೀಡಲಾಗಿದೆ.

(3) ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ : ರೂ. 30,000/– ಗಳನ್ನು ಇಬ್ಬರು ಸದಸ್ಯರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ನೀಡಲಾಗಿದೆ.

## ಸೂಚನೆ :

1. ಮಹಾಸಭೆ ಸೂಚನಾ ಪತ್ರಿಕೆಯನ್ನು ಬ್ಯಾಂಕಿನ ಸೂಚನಾ ಫಲಕದಲ್ಲೂ, ಬ್ಯಾಂಕಿನ ವೆಬ್-ಸೈಟ್ ನಲ್ಲೂ ಹಾಗೂ ಒಂದು ಜನಪ್ರಿಯ ಕನ್ನಡ ದಿನಪತ್ರಿಕೆಯಲ್ಲೂ ಪ್ರಕಟಿಸಲಾಗುವುದು. ಅಲ್ಲದೇ ಪ್ರತಿಯೊಬ್ಬ ಸದಸ್ಯರ ನೋಂದಾಯಿತ ವಿಳಾಸಕ್ಕೆ ತೆರೆದ ಅಂಚೆಯ ಮೂಲಕ ಕಳುಹಿಸಲಾಗುವುದು. ವಿಶೇಷವಾಗಿ ಸರಳ ಮಾಹಿತಿ ಸಂದೇಶ (ಎಸ್.ಎಂ.ಎಸ್) ಮೂಲಕ ಸದಸ್ಯರ ಮೊಬೈಲ್‌ಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುವುದು.

2. ಬ್ಯಾಂಕಿನ ಲೆಕ್ಕಪರಿಶೋಧನೆಯಾದ ಆರ್ಥಿಕ ತಃಖ್ತೆಗಳನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಬ್ಯಾಂಕಿನ ವಾರ್ಷಿಕ ವರದಿಯ ಪುಸ್ತಕವನ್ನು ಬ್ಯಾಂಕಿನ ವ್ಯವಹಾರದ ಸಮಯದಲ್ಲಿ ಬ್ಯಾಂಕಿಗೆ ಭೇಟಿ ನೀಡಿ ಪಡೆದುಕೊಳ್ಳಬೇಕಾಗಿ ವಿನಂತಿಸಲಾಗಿದೆ.

3. ಬ್ಯಾಂಕಿನ ವಾರ್ಷಿಕ ಸಭೆಯಲ್ಲಿ ವಿಷಯ ಮಂಡಿಸಲು ಇಚ್ಛಿಸುವವರು ವಾರ್ಷಿಕ ಮಹಾಸಭೆಗೆ ಐದು ದಿನಗಳ ಮೊದಲು ಲಿಖಿತ ಪತ್ರದ ಮೂಲಕ ಕಾರ್ಯದರ್ಶಿಯವರಿಗೆ ತಿಳಿಸಬೇಕು ಅಥವಾ e-mail:ho@ashoknagarbank.com ಅಥವಾ ವಾಟ್ಸ್‌ಅಪ್ ನಂಬರ್ 9108510080 ಇದಕ್ಕೆ ಮಾಹಿತಿಗಳನ್ನು ಕಳುಹಿಸಲು ಕೋರಿದೆ.

4. ಡಿವಿಡೆಂಡ್ ಪಡೆಯದೆ ಇರುವ ಸದಸ್ಯರು ಡಿವಿಡೆಂಡನ್ನು ಬ್ಯಾಂಕಿಗೆ ಬಂದು ಪಡೆಯುವುದು. ಮೂರು ವರ್ಷಗಳವರೆಗೂ ಡಿವಿಡೆಂಡ್ ಪಡೆಯದೇ ಇದ್ದ ಪಕ್ಷದಲ್ಲಿ ಅದನ್ನು ಬ್ಯಾಂಕಿನ ಆಪದ್ಧನ ನಿಧಿಗೆ ವರ್ಗಾಯಿಸಲಾಗುವುದು.

5. ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆಯದೇ ಇರುವ ಸದಸ್ಯರುಗಳು ಕೂಡಲೇ ಉಳಿತಾಯ ಖಾತೆಯನ್ನು ತೆರೆದು ಡಿವಿಡೆಂಡ್ ಮೊಬಲಗನ್ನು ಅವರುಗಳ ಖಾತೆಗೆ ವರ್ಗಾಯಿಸಿಕೊಳ್ಳುವುದು ಮತ್ತು ಈಗಾಗಲೇ ಉಳಿತಾಯ ಅಥವಾ ಚಾಲ್ತಿ ಖಾತೆ ಹೊಂದಿರುವ ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆಯನ್ನು ಬ್ಯಾಂಕಿಗೆ ನೀಡಿ ಎಸ್.ಎಂ.ಎಸ್ ಅಲರ್ಟ್‌ಗಳನ್ನು ಪಡೆಯಬಹುದು.

6. ಬ್ಯಾಂಕಿನಲ್ಲಿ ಮರಣೋತ್ತರ ಪರಿಹಾರ ನಿಧಿಯನ್ನು ಸ್ಥಾಪಿಸಲಾಗಿದೆ. ಸದಸ್ಯರು 300/- ಪಾವತಿಸಿ ಸದಸ್ಯರಾಗಬೇಕು. ಮರಣೋತ್ತರ ಪರಿಹಾರ ನಿಧಿಯಾಗಿ ರೂ 5000/- ವನ್ನು ಅವರ ಅಧಿಕೃತ ವಾರಸುದಾರರಿಗೆ ನೀಡಲಾಗುವುದು. ಬ್ಯಾಂಕಿನ ಹಲವಾರು ಸದಸ್ಯರು ಈ

ಮರಣೋತ್ತರ ನಿಧಿಗೆ ಸದಸ್ಯರಾಗಿರುವುದಿಲ್ಲ. ಆದುದರಿಂದ ಕಡ್ಡಾಯವಾಗಿ ಈ ಸದಸ್ಯರುಗಳು ಕೂಡಲೇ ಈ ಸದಸ್ಯತ್ವವನ್ನು ಪಡೆದುಕೊಳ್ಳಬೇಕೆಂದು ತಿಳಿಯಬಯಸುತ್ತೇವೆ.

7. 2022–23 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ/ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇ.85% ಕ್ಕೂ ಹೆಚ್ಚಿನ ಅಂಕಗಳಿಸಿದ ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಶೇ 75% ಕ್ಕೂ ಹೆಚ್ಚಿನ ಅಂಕಗಳನ್ನು ಪಡೆದ ಸದಸ್ಯರ ಮಕ್ಕಳಿಗೆ ಮತ್ತು ಸರ್ಕಾರಿ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಇದಕ್ಕೆ ಸಂಬಂಧಿಸಿದ ಅರ್ಜಿ ನಮೂನೆಯನ್ನು ಬ್ಯಾಂಕಿನ ವೇಳೆಯಲ್ಲಿ ಪಡೆದು ವಿವರಗಳನ್ನೊಳಗೊಂಡ ಅರ್ಜಿಗಳನ್ನು ವ್ಯವಸ್ಥಾಪಕರಿಗೆ ದಿನಾಂಕ : 15–09–2024 ರೊಳಗೆ ಸಲ್ಲಿಸತಕ್ಕದ್ದು. ಅರ್ಹ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಗಳನ್ನು ಅವರವರ ಖಾತೆಗಳಿಗೆ ಜಮಾ ಮಾಡಲಾಗುವುದು. ಅದಕ್ಕೆ ಸಂಬಂಧಪಟ್ಟ ಖಾತೆಗಳ ವಿವರಗಳನ್ನು ನೀಡಲು ಅಥವಾ ಖುದ್ದು ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಪಡೆಯಲು ಕೋರಿದೆ.

## : ಬ್ಯಾಂಕಿನ ಸದಸ್ಯರು ಕಡ್ಡಾಯವಾಗಿ ನಿರ್ವಹಿಸಬೇಕಾದ ಮೂಲ ಕರ್ತವ್ಯಗಳು :

1. ಕೇಂದ್ರೀಕೃತ ಕೆ.ವೈ.ಸಿ (ನಿಮ್ಮ ಗ್ರಾಹಕರನ್ನು ತಿಳಿ) (centralized know Your customer) ಮಾಹಿತಿ ಸಂಗ್ರಹಕ್ಕೆ ಕೇಂದ್ರ ಸರ್ಕಾರ ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರೀಕೃತ ಕೆ.ವೈ.ಸಿ ನಿಯಮಾವಳಿ ರಚಿಸಿದ್ದು ಅದರನ್ವಯ ಗ್ರಾಹಕರ ಮಾಹಿತಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕಾಗಿದ್ದು ಎಲ್ಲಾ ಗ್ರಾಹಕರು ಮತ್ತು ಸದಸ್ಯರು ತಮ್ಮ ಪಾನ್ ಸಂಖ್ಯೆ, ಆಧಾರ್ ಸಂಖ್ಯೆ, ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ಮೊಬೈಲ್ ಸಂಖ್ಯೆಗಳನ್ನು ಬ್ಯಾಂಕಿನಲ್ಲಿರುವ ತಮ್ಮ ಖಾತೆಗಳಿಗೆ ಕಡ್ಡಾಯವಾಗಿ ಒದಗಿಸತಕ್ಕದ್ದು. ತಪ್ಪಿದಲ್ಲಿ ತಮ್ಮ ಖಾತೆಗಳು ನಿಷ್ಕ್ರಿಯವಾಗುತ್ತದೆ.

2. ಆದಾಯ ತೆರಿಗೆ ನಿಯಮ 114 AAA 1962 ನೋಟಿಫಿಕೇಷನ್ ನಂ 15 of 2023, dated 28.03.2023 ಪ್ರಕಾರ ಬ್ಯಾಂಕಿನ ಎಲ್ಲಾ ಗ್ರಾಹಕರು ತಮ್ಮ ಆಧಾರ ಸಂಖ್ಯೆಯನ್ನು ಪಾನ್ ನಂಬರಿಗೆ ಕಲಂ 139AAA ಪ್ರಕಾರ ಲಿಂಕ್/ಜೋಡಣೆ ಮಾಡಬೇಕಾಗಿದ್ದು ತಪ್ಪಿದಲ್ಲಿ ಪಾನ್ ನಂಬರ್ ನಿಷ್ಕ್ರಿಯವಾಗುತ್ತದೆ. ಇದರ ಪರಿಣಾಮ ಗ್ರಾಹಕರು 15ಜಿ/ಹೆಚ್ ನೀಡಲು ಸಾಧ್ಯವಾಗುವುದಿಲ್ಲ. ಈಗಾಗಲೇ 15 ಜಿ/ಹೆಚ್ ನೀಡಿದ ಸದಸ್ಯರುಗಳ 15ಜಿ/ಹೆಚ್‌ಗಳು ಸಹ

ಮಾನ್ಯವಾಗುವುದಿಲ್ಲ. ಮತ್ತು ನೇರವಾಗಿ ಟಿ.ಡಿ.ಎಸ್ ಅನ್ನು 20% ಕಡಿತಗೊಳಿಸಲಾಗುವುದು. ಈಗಾಗಲೇ 10% ಟಿ.ಡಿ.ಎಸ್ ಪಾವತಿಸುತ್ತಿರುವ ಸದಸ್ಯರುಗಳು ಸಹ ಆಧಾರ್ ಲಿಂಕ್ ಮಾಡಿಸಿಕೊಳ್ಳುವುದು ಸೂಕ್ತ. ತಪ್ಪಿದಲ್ಲಿ 20% ಟಿ.ಡಿ.ಎಸ್ ಅನ್ನು ಕಡಿತಗೊಳಿಸಲಾಗುವುದು. ಆದ್ದರಿಂದ ಸದಸ್ಯರುಗಳು ಇದರಿಂದ ಆಗುವ ಅನಾನುಕೂಲಗಳಿಂದ ತಪ್ಪಿಸಿಕೊಳ್ಳಲು ತಪ್ಪದೇ ತಮ್ಮ ಆಧಾರ್ ಸಂಖ್ಯೆಯನ್ನು ಪಾನ್ ನಂಬರ್‌ಗೆ ಲಿಂಕ್/ಜೋಡಿಸಿಕೊಳ್ಳಲು ತಮ್ಮಲ್ಲಿ ಮನವಿ.

3. ಸ್ಥಿರಾಸ್ತಿ ಅಡಮಾನ ಸಾಲ ಪಡೆದ ಸದಸ್ಯರು ತಮ್ಮ ಸ್ಥಿರಾಸ್ತಿಗೆ ಸಂಬಂಧಪಟ್ಟ ಆಸ್ತಿ ತೆರಿಗೆ ಪತ್ರ ಮತ್ತು ಋಣಭಾರ ಪತ್ರವನ್ನು ಪ್ರತೀವರ್ಷ ಏಪ್ರಿಲ್ ತಿಂಗಳಿನಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಮತ್ತು ಸಾಲ ತೆಗೆದುಕೊಂಡ 3 ವರ್ಷ ಮೇಲ್ಪಟ್ಟ ಸದಸ್ಯರು ಬ್ಯಾಂಕಿನ ಮೌಲ್ಯಮಾಪಕರಿಂದ ಸ್ಥಿರಾಸ್ತಿಯ ಮೌಲ್ಯಮಾಪನ ಮಾಡಿಸಿ ಅದರ ವರದಿಯನ್ನು ಬ್ಯಾಂಕಿಗೆ ಸಲ್ಲಿಸತಕ್ಕದ್ದು.

4. ಸದಸ್ಯರ ಹಕ್ಕು ಚಲಾಯಿಸಲು ಕನಿಷ್ಠ ಬ್ಯಾಂಕಿಂಗ್ ವ್ಯವಹಾರ ಹಾಗೂ ಸಾಮಾನ್ಯ ಸಭೆಗೆ ಹಾಜರಾತಿ ಅಗತ್ಯವಾದ ಹಿನ್ನೆಲೆಯಲ್ಲಿ ತಮ್ಮ ಎಲ್ಲಾ ವ್ಯವಹಾರಗಳನ್ನು ನಮ್ಮ ಬ್ಯಾಂಕಿನಲ್ಲೇ ಮಾಡಲು ಮನವಿ.

## ಬ್ಯಾಂಕಿನ ಕಛೇರಿ ವ್ಯವಹಾರದ ವೇಳೆ :

**ಸೋಮವಾರದಿಂದ ಶನಿವಾರದವರೆಗೆ :**

ಬೆಳಗ್ಗೆ : 10–00 ರಿಂದ ಮಧ್ಯಾಹ್ನ 1–30

ಮಧ್ಯಾಹ್ನ : 2–00 ರಿಂದ ಸಂಜೆ 5–30 ರವರೆಗೆ

**ರಜಾ ದಿನಗಳು :**

ಪ್ರತೀ ಭಾನುವಾರದ ಜೊತೆಗೆ ತಿಂಗಳ 2ನೇ ಮತ್ತು 4ನೇ ಶನಿವಾರಗಳು.

## ನಮ್ಮ ಮೌಲ್ಯವರ್ಧಿತ ಸೇವೆಗಳು

- ❖ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸಮಾನವಾದ ಸೌಲಭ್ಯಗಳನ್ನು ಗ್ರಾಹಕರಿಗೆ ನೀಡುವುದು.
- ❖ ಉಳಿತಾಯ ಖಾತೆ, ಚಾಲ್ತಿ ಖಾತೆ, ಆವರ್ತಕ ಠೇವಣಿ, ಗಡು ಠೇವಣಿ ಸೌಲಭ್ಯಗಳು
- ❖ ಲಾಕರ್ ಸೌಲಭ್ಯಗಳು ಲಭ್ಯವಿದೆ.
- ❖ ಡಿಮ್ಯಾಂಡ್ ಡ್ರಾಫ್ಟ್, ಬ್ಯಾಂಕರ್ಸ್ ಚೆಕ್, ಪೇ ಆರ್ಡರ್ಸ್, NEFT/RTGS ಮೂಲಕ ಹಣ ವರ್ಗಾವಣೆ
- ❖ ಪಿಒಎಸ್ (ಪಾಯಿಂಟ್ ಆಫ್ ಸೇಲ್) ಸ್ವೈಪಿಂಗ್ ಯಂತ್ರಗಳನ್ನು ಚಾಲ್ತಿ ಖಾತೆದಾರರಿಗೆ ನೀಡಲಾಗುತ್ತದೆ.
- ❖ ರುಪೇ ಕಾರ್ಡ್, ಕ್ಯೂಆರ್ ಕೋಡ್ ಸೌಲಭ್ಯವನ್ನು ಗ್ರಾಹಕರಿಗೆ ಒದಗಿಸಲಾಗಿದೆ.

## ಠೇವಣಾತಿಗಳ ಮೇಲಿನ ಬಡ್ಡಿ ದರ

| ಅವಧಿ | ಸಾಮಾನ್ಯ ನಾಗರೀಕರಿಗೆ | ಹಿರಿಯ ನಾಗರೀಕರಿಗೆ |
|---|---|---|
| 31 ದಿನಗಳಿಂದ 90 ದಿನಗಳು | 5.00 | 5.00 |
| 91 ದಿನಗಳಿಂದ 180 ದಿನಗಳು | 5.50 | 5.50 |
| 181 ದಿನಗಳಿಂದ 365 ದಿನಗಳು | 6.75 | 7.25 |
| 1 ವರ್ಷದ ಮೇಲ್ಪಟ್ಟು 2 ವರ್ಷದವರೆಗೆ | 7.50 | 8.00 |
| 2 ವರ್ಷದ ಮೇಲ್ಪಟ್ಟು 3 ವರ್ಷದವರೆಗೆ | 8.00 | 8.50 |
| 3 ವರ್ಷದ ಮೇಲ್ಪಟ್ಟು 5 ವರ್ಷದವರೆಗೆ | 7.75 | 8.25 |

- ➢ ಚಿನ್ನಾಭರಣಗಳ ಮೇಲಿನ ಸಾಲ ರೂ 15 ಲಕ್ಷಗಳವರೆಗೆ
- ➢ ಮನೆ ಖರೀದಿ/ ನಿರ್ಮಾಣ ಸಾಲ ರೂ 140 ಲಕ್ಷಗಳವರೆಗೆ
- ➢ ಶೈಕ್ಷಣಿಕ ಸಾಲ ರೂ 20 ಲಕ್ಷಗಳವರೆಗೆ
- ➢ ಅಡಮಾನ/ಮೀರಳತೆ ಸಾಲ ರೂ 285 ಲಕ್ಷಗಳವರೆಗೆ
- ➢ ವ್ಯಾಪಾರ ಸಮೂಹ ಸಂಸ್ಥೆಗಳ ಮೇಲಿನ ಸಾಲ ರೂ 480 ಲಕ್ಷಗಳವರೆಗೆ.
- ➢ ವಾಹನ ಸಾಲ ರೂ 15 ಲಕ್ಷಗಳವರೆಗೆ
- ➢ ಜಂಟಿ ಸಾಲ ರೂ 1 ಲಕ್ಷಗಳವರೆಗೆ
- ➢ ಎಲ್ ಐ ಸಿ/ ಕಿಸಾನ್ ವಿಕಾಸ್ ಬಾಂಡ್‌ಗಳ ಮೇಲಿನ ಸಾಲ ರೂ 5 ಲಕ್ಷಗಳವರೆಗೆ.

ನಮ್ಮ ಗ್ರಾಹಕರ ಅಗತ್ಯತೆಗಳ ಆಧಾರದ ಮೇಲೆ ಕಡಿಮೆ ಸಮಯದಲ್ಲಿ ಸಾಲಗಳನ್ನು ಮಂಜೂರು ಮಾಡಿ ವಿತರಿಸಲಾಗುತ್ತದೆ.

| ಸಾಲಗಳ ವಿವರ | |
|---|---|
| ಸ್ಥಿರಾಸ್ತಿ ಆಧಾರದ ಮೇಲೆ ನೀಡುವ ಸಾಲಗಳು | % |
| ಮನೆ ಖರೀದಿ/ ನಿರ್ಮಾಣ | |
| ರೂ 25 ಲಕ್ಷಗಳವರೆಗೆ | 9.00 |
| ರೂ 25 ಲಕ್ಷಗಳ ಮೇಲ್ಪಟ್ಟು ರೂ 50 ಲಕ್ಷಗಳವರೆಗೆ | 9.50 |
| ರೂ 50 ಲಕ್ಷಗಳ ಮೇಲ್ಪಟ್ಟು ರೂ 1 ಕೋಟಿವರೆಗೆ | 10.00 |
| ರೂ 1 ಕೋಟಿಯ ಮೇಲ್ಪಟ್ಟು ರೂ 1.40 ಕೋಟಿಯವರೆಗೆ | 10.50 |
| | |
| ನಿವೇಶನ ಖರೀದಿ | |
| ರೂ 25 ಲಕ್ಷಗಳವರೆಗೆ | 10.50 |
| ರೂ 25 ಲಕ್ಷಗಳ ಮೇಲ್ಪಟ್ಟು ರೂ 50 ಲಕ್ಷಗಳವರೆಗೆ | 11.00 |
| ರೂ 50 ಲಕ್ಷಗಳ ಮೇಲ್ಪಟ್ಟು ರೂ 1 ಕೋಟಿವರೆಗೆ | 11.50 |
| ರೂ 1 ಕೋಟಿಯ ಮೇಲ್ಪಟ್ಟು ರೂ 1.40 ಕೋಟಿಯವರೆಗೆ | 12.00 |
| | |
| ಶೈಕ್ಷಣಿಕ ಸಾಲ | |
| ರೂ 10 ಲಕ್ಷಗಳವರೆಗೆ | 10.00 |
| 10 ಲಕ್ಷಕ್ಕೆ ಮೇಲ್ಪಟ್ಟು 20 ಲಕ್ಷಗಳವರೆಗೆ | 10.50 |
| | |
| ಸಾಲ ತೀರುವಳಿಗಾಗಿ | |
| ರೂ 25 ಲಕ್ಷಗಳವರೆಗೆ | 11.00 |
| | |
| ರಿಯಲ್ ಎಸ್ಟೇಟ್ ಸಾಲ – CRE | |
| ರೂ 25 ಲಕ್ಷಗಳವರೆಗೆ | 11.50 |
| ರೂ 25 ಲಕ್ಷಗಳ ಮೇಲ್ಪಟ್ಟು ರೂ 50 ಲಕ್ಷಗಳವರೆಗೆ | 12.00 |
| ರೂ 50 ಲಕ್ಷಗಳ ಮೇಲ್ಪಟ್ಟು ರೂ 1 ಕೋಟಿವರೆಗೆ | 12.50 |
| ರೂ 1 ಕೋಟಿಯ ಮೇಲ್ಪಟ್ಟು ರೂ 2.85 ಕೋಟಿಯವರೆಗೆ | 13.00 |
| | |

| | |
|---|---|
| **ವ್ಯಾಪಾರ ಉದ್ದೇಶಕ್ಕಾಗಿ ಸಾಲ** | |
| ರೂ 25 ಲಕ್ಷಗಳವರೆಗೆ | 11.00 |
| ರೂ 25 ಲಕ್ಷಗಳ ಮೇಲ್ಪಟ್ಟು ರೂ 50 ಲಕ್ಷಗಳವರೆಗೆ | 11.50 |
| ರೂ 50 ಲಕ್ಷಗಳ ಮೇಲ್ಪಟ್ಟು ರೂ 1 ಕೋಟಿವರೆಗೆ | 11.75 |
| ರೂ 1 ಕೋಟಿಯ ಮೇಲ್ಪಟ್ಟು ರೂ 2.85 ಕೋಟಿಯವರೆಗೆ | 12.00 |
| | |
| **ಮೀರಳತೆ ಸಾಲ** | |
| ರೂ 25 ಲಕ್ಷಗಳವರೆಗೆ | 11.00 |
| ರೂ 25 ಲಕ್ಷಗಳ ಮೇಲ್ಪಟ್ಟು ರೂ 50 ಲಕ್ಷಗಳವರೆಗೆ | 11.50 |
| ರೂ 50 ಲಕ್ಷಗಳ ಮೇಲ್ಪಟ್ಟು ರೂ 1 ಕೋಟಿವರೆಗೆ | 11.75 |
| ರೂ 1 ಕೋಟಿಯ ಮೇಲ್ಪಟ್ಟು ರೂ 2.85 ಕೋಟಿಯವರೆಗೆ | 12.00 |
| | |
| **ಬಿ–ಖಾತಾ** | |
| ಇತರೆ ಉದ್ದೇಶಗಳಿಗೆ | 12.00 |
| | |
| **ಎಲ್.ಐ.ಸಿ ಮೇಲಿನ ಸಾಲ** | 11.00 |
| | |
| **ಚಿನ್ನಾಭರಣಗಳ ಮೇಲಿನ ಸಾಲ** | |
| ರೂ 1 ಲಕ್ಷಗಳವರೆಗೆ | 9.00 |
| ರೂ 1 ಲಕ್ಷದ ಮೇಲ್ಪಟ್ಟು ರೂ 15 ಲಕ್ಷಗಳವರೆಗೆ | 9.50 |
| | |
| **ವಾಹನ ಸಾಲ** | |
| ವೈಯಕ್ತಿಕ – ರೂ 15 ಲಕ್ಷಗಳವರೆಗೆ | 11.50 |
| ವಾಣಿಜ್ಯಕ್ಕಾಗಿ – ರೂ 15 ಲಕ್ಷಗಳವರೆಗೆ | 12.50 |
| | |
| **ಜಂಟಿ ಸಾಲ** | |
| ರೂ 1 ಲಕ್ಷಗಳವರೆಗೆ | 16.00 |
| | |

# ಅಶೋಕನಗರ ಸಹಕಾರ ಬ್ಯಾಂಕ್ ನಿಯಮಿತ

## ಕಳೆದ ಐದು (5) ವರ್ಷಗಳ ಪಕ್ಷಿ ನೋಟ

(ಲಕ್ಷಗಳಲ್ಲಿ)

| ಕ್ರ. ಸಂ. | ವಿವರ | 31.3.2020 | 31.03.2021 | 31.03.2022 | 31.03.2023 | 31.03.2024 |
|---|---|---|---|---|---|---|
| 1. | ಸದಸ್ಯತ್ವ | 5755 | 5864 | 5863 | 5860 | 5867 |
| 2. | ಷೇರು ಬಂಡವಾಳ | 771 | 809 | 715 | 753 | 748 |
| 3. | ಆಪದ್ಧನ ನಿಧಿ ಮತ್ತು ಇತರೆ ನಿಧಿಗಳು | 1663 | 2256 | 2559 | 2852 | 3191 |
| 4. | ಠೇವಣಿಗಳು | 10773 | 11586 | 12584 | 12773 | 12185 |
| 5. | ಸಾಲಗಳು | 7600 | 9074 | 8388 | 8483 | 8524 |
| 6. | ಹೂಡಿಕೆಗಳು | 5163 | 4956 | 6574 | 7109 | 6867 |
| 7. | ದುಡಿಯುವ ಬಂಡವಾಳ | 13526 | 14954 | 16252 | 16884 | 16558 |
| 8 | ನಿವ್ವಳ ಲಾಭಾಂಶ | 144 | 126 | 107 | 128 | 213 |
| 9 | ಡಿವಿಡೆಂಡ್ (ಶೇ.) | ಕೋವಿಡ್ ಪರಿಣಾಮದಿಂದಾಗಿ ಆರ್.ಬಿ.ಐ. ಯಾವುದೇ ಬ್ಯಾಂಕಿಗೆ ಡಿವಿಡೆಂಡ್ ವಿತರಿಸಲು ಅನುಮತಿ ನೀಡಿರುವುದಿಲ್ಲ. | 10% | 10% | 10% | 10% ಸೂಚಿಸಿದೆ. (ರಿಸರ್ವ್ ಬ್ಯಾಂಕಿನ ಅನುಮತಿ ಮೇರೆಗೆ) |
| 10 | ಆಡಿಟ್ ವರ್ಗೀಕರಣ | ಎ ಶ್ರೇಣಿ | ಎ ಶ್ರೇಣಿ | ಎ ಶ್ರೇಣಿ | ಎ ಶ್ರೇಣಿ | ಎ ಶ್ರೇಣಿ |
| 11 | ನಿವ್ವಳ ಅನುತ್ಪಾದಕ ಆಸ್ತಿ (Net NPA) | 5.72% | 5.16% | 6.36% | 8.52% | 4.25% |

ತೆರೆದ – ಅಂಚೆ

ಶ್ರೀಮತಿ/ಶ್ರೀ

ವಿಳಾಸದಾರರಿಗೆ ತಲುಪದಿದ್ದಲ್ಲಿ ಕೆಳಕಂಡ ವಿಳಾಸಕ್ಕೆ ಹಿಂತಿರುಗಿಸಿ :

**ಅಶೋಕನಗರ ಸಹಕಾರ ಬ್ಯಾಂಕ್ ನಿಯಮಿತ**

ನಂ. 1380/ಬಿ, 6ನೇ ಅಡ್ಡರಸ್ತೆ, ಅಶೋಕನಗರ,
ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು – 560 050.